# ಮದರಂಗಿಯ ಸಾತ್ತ್ವಿಕ ವಿನ್ಯಾಸದ ವಿಧಗಳು

## ಮನೋಗತ

‘ಕಲೆ’ಯು ವ್ಯಕ್ತಿಯನ್ನು ಈಶ್ವರಪ್ರಾಪ್ತಿಯ ಕಡೆಗೆ ಕೊಂಡೊಯ್ಯುವ ಒಂದು ಸಾಧನ ವಾಗಿದೆ. ‘ಕಲೆಯ ಮಾಧ್ಯಮದಿಂದ ‘ಸಾಧನೆ’ಯನ್ನು ಮಾಡುವುದೆ’ಂದರೆ ಕಲಾಕೃತಿಯನ್ನು ಈಶ್ವರನಿಗೆ ಅಪೇಕ್ಷಿತವಿರುವಂತೆ ಸಾತ್ತ್ವಿಕಗೊಳಿಸುವುದು ಮತ್ತು ಅದಕ್ಕಿಂತಲೂ ಮುಂದೆ ಹೋಗಿ ಯಾವುದಾದರೊಂದು ದೇವತೆಯ ತತ್ತ್ವದ ಹೆಚ್ಚೆಚ್ಚು ಸಮೀಪ ಹೋಗುವಂತಹದನ್ನು ಸಿದ್ಧಪಡಿಸಲು ಪ್ರಯತ್ನಿಸುವುದು’. ಮೊದಲ ನೋಟದಲ್ಲಿ ಬಹಳ ಸಾಮಾನ್ಯ ಮತ್ತು ಸಹಜವಾಗಿ ಸಾಧ್ಯಗೊಳಿಸಬಹುದು ಎಂದೆನಿಸುವ ‘ಮದರಂಗಿಯ ಕಲೆ’ಯಿಂದಲೂ ಈ ರೀತಿಯ ಸಾಧನೆ ಯನ್ನು ಮಾಡಬಹುದು. ಆ ದೃಷ್ಟಿಯಿಂದ ಈಶ್ವರನಿಗೆ ಅಪೇಕ್ಷಿತವಿರುವ ಮದರಂಗಿಯ ಸಾತ್ತ್ವಿಕ ವಿನ್ಯಾಸಗಳನ್ನು ಬಿಡಿಸಲು ಮೊದಲು ಸಾತ್ತ್ವಿಕ ಮತ್ತು ಅಸಾತ್ತ್ವಿಕಗಳ ನಡುವಿನ ವ್ಯತ್ಯಾಸ ವಾಚಕರ ಗಮನಕ್ಕೆ ಬರುವುದು ಆವಶ್ಯಕವಾಗಿದೆ. ಅದಕ್ಕಾಗಿ ಮದರಂಗಿಯಲ್ಲಿ ಯಾವಾಗಲೂ ಉಪಯೋಗಿಸಲಾಗುವ ವಿವಿಧ ಆಕೃತಿಗಳು ಯಾವುವು, ಅವುಗಳಲ್ಲಿ ಸಾತ್ತ್ವಿಕ ಮತ್ತು ಅಸಾತ್ತ್ವಿಕ ಆಕೃತಿಗಳು ಯಾವುವು, ಯಾವುದಾದರೊಂದು ಆಕೃತಿಯು ಸಾತ್ತ್ವಿಕವೋ ಅಥವಾ ಅಸಾತ್ತ್ವಿಕವೋ ಎಂಬುದು ಯಾವುದರಿಂದ ತಿಳಿಯುತ್ತದೆ, ಯಾವುದಾದರೊಂದು ರಾಜಸಿಕ ಆಕಾರವನ್ನು ಬಿಡಿಸಿಯೂ ಸಂಪೂರ್ಣ ವಿನ್ಯಾಸವನ್ನು ಹೇಗೆ ಸಾತ್ತ್ವಿಕಗೊಳಿಸಬಹುದು ? ಮುಂತಾದ ವಿಷಯಗಳ ಮಾಹಿತಿಯನ್ನು ಈ ಗ್ರಂಥದಲ್ಲಿ ನೀಡಲಾಗಿದೆ. ವಿಷಯ ತಿಳಿಯಲು ಸುಲಭವಾಗಬೇಕೆಂದು ಅನೇಕ ಸರಳ ಪ್ರಯೋಗಗಳನ್ನು ಸಹ ನೀಡಲಾಗಿದೆ.

ಮದರಂಗಿಯನ್ನು ಬಿಡಿಸುವವನಲ್ಲಿರುವ ಈಶ್ವರನ ಕುರಿತಾದ ಭಾವದಿಂದಾಗಿ ಯಾವು ದಾದರೊಂದು ಅಸಾತ್ತ್ವಿಕ ವಿನ್ಯಾಸವು ಸಾತ್ತ್ವಿಕವಾದ ಕೆಲವು ಉದಾಹರಣೆಗಳೂ ಗ್ರಂಥದಲ್ಲಿವೆ; ಅರ್ಥಾತ್ ವಿನ್ಯಾಸವು ತೀರಾ ರಜ-ತಮಪ್ರಧಾನವಾಗಿದ್ದರೆ, ಅದನ್ನು ಭಾವಪೂರ್ಣವಾಗಿ ಬಿಡಿಸಿದರೂ ಅದು ಸಾತ್ತ್ವಿಕವಾಗಲಾರದು ಎಂಬುದೂ ಅಷ್ಟೇ ನಿಜವಾಗಿದೆ ! ಇದಕ್ಕಾಗಿ ಕೇವಲ ವಾಚಕರ ಮಾಹಿತಿಗಾಗಿ ಕೆಲವು ತಾಮಸಿಕ ವಿನ್ಯಾಸಗಳ ಉದಾಹರಣೆಗಳನ್ನೂ ನೀಡಲಾಗಿದೆ. ಈ ಗ್ರಂಥದಲ್ಲಿ ಸಾತ್ತ್ವಿಕ ಮತ್ತು ದೇವತೆಗಳ ತತ್ತ್ವಗಳನ್ನು ಆಕರ್ಷಿಸುವ ಕೆಲವು ವಿನ್ಯಾಸಗಳನ್ನು ನೀಡಲಾಗಿದೆ. ಈ ವಿನ್ಯಾಸಗಳು ಕಲಾಕಾರ ಸಾಧಕಿಯರಿಗೆ ಈಶ್ವರನ ಕೃಪೆಯಿಂದ ಪ್ರಾಪ್ತವಾದ ಜ್ಞಾನದಿಂದ ಸಾಕಾರವಾಗಿವೆ. ಈ ವಿನ್ಯಾಸಗಳನ್ನು ಬಿಡಿಸುವಾಗ, ಹಾಗೆಯೇ ‘ಸಾಧನೆ’ಯೆಂದು ಅವುಗಳನ್ನು ಗಣಕಯಂತ್ರದಲ್ಲಿ ಸಾದರಪಡಿಸುವಾಗ ಸಾಧಕಿಯರಿಗೆ ಭಾವ, ಚೈತನ್ಯ ಆನಂದ ಮುಂತಾದ ವಿವಿಧ ಸ್ತರಗಳ ಅನುಭೂತಿಗಳು ಬಂದವು. ಈ ಮದರಂಗಿಗಳನ್ನು ಭಾವಪೂರ್ಣವಾಗಿ ಬಿಡಿಸುವವರಿಗೂ ಅಂತಹ ಅನುಭೂತಿಗಳೇ ಬರುವವು.

ಈ ಗ್ರಂಥವನ್ನು ಓದಿ ಮದರಂಗಿಯ ಕಲೆಯನ್ನು ‘ಸಾಧನೆ’ಯೆಂದು ನೋಡುವ ಮತ್ತು ಅದರಿಂದ ಹೆಚ್ಚೆಚ್ಚು ಆಧ್ಯಾತ್ಮಿಕ ಲಾಭ ಪಡೆದುಕೊಳ್ಳುವ ಪ್ರೇರಣೆ ವಾಚಕರಲ್ಲಿ ನಿರ್ಮಾಣವಾಗಲೆಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ ! - **ಸಂಕಲನಕಾರರು**

## ಅನುಕ್ರಮಣಿಕೆ


**೧. ಮದರಂಗಿಯ ವಿನ್ಯಾಸಗಳು** **೧೭**

೧ ಅ. ಮದರಂಗಿಯ ವಿನ್ಯಾಸದ ಮಹತ್ವ ೧೭

೧ ಆ. ಸಾತ್ತ್ವಿಕ ವಿನ್ಯಾಸಗಳನ್ನು ಬಿಡಿಸಿರಿ ! ೧೭

೧ ಆ ೧. ವಿನ್ಯಾಸದ ಸ್ಪಂದನಗಳು ಅವಲಂಬಿಸಿರುವ ಕೆಲವು ಘಟಕಗಳು ೧೮

ಅ. ಆಕಾರ (shape) ಆ. ಗಾತ್ರ (size) ೧೮

ಇ. ದಿಕ್ಕು ಈ. ಗತಿದರ್ಶಕತೆ (ವೇಗದರ್ಶಕ) ೨೭

ಉ. ಪ್ರಮಾಣಬದ್ಧತೆ ಅಥವಾ ಸಮಾನತೆ (Symmetry) ೩೩

ಊ. ರಚನೆ ಎ. ಸಮತೋಲನ (balance) ೩೬

ಏ. ಖಾಲಿ ಜಾಗ ಐ. ಬಂಧಿಸುವಿಕೆ ೪೧

ಒ. ವಿನ್ಯಾಸಗಳಲ್ಲಿನ ಆಕೃತಿಗಳಲ್ಲಿರುವ ಅಖಂಡತೆ ೪೩

ಓ. ಕಲೆಗಿಂತ ನೈಸರ್ಗಿಕತೆ ಬೇಕು ೪೫

ಔ. ಸಮರೂಪ (Similarity) ಅಥವಾ
ಪರಸ್ಪರ ಪೂರಕ (Complementary) ಆಗಿರುವುದು ೪೫

೧ ಆ ೨. ಕೆಲವು ಸಾತ್ತ್ವಿಕ ಮತ್ತು ರಾಜಸಿಕ ವಿನ್ಯಾಸಗಳ ಉದಾಹರಣೆಗಳು ೪೬

೧ ಆ ೩. ೫ ವರ್ಷದವರೆಗಿನ ಹುಡುಗ-ಹುಡುಗಿಯರ ಕೈಕಾಲುಗಳ ಮೇಲೆ
ಮದರಂಗಿಯಿಂದ ಬಿಡಿಸಬೇಕಾದ ವಿನ್ಯಾಸಗಳು ೬೪

೧ ಇ. ಮದರಂಗಿಯನ್ನು ಯಾರು ಬಿಡಿಸಬೇಕು ? ೬೪

**೨. ಮದರಂಗಿಯ ಸಾತ್ತ್ವಿಕ ವಿನ್ಯಾಸಗಳ ನಿರ್ಮಿತಿಯ ಸೇವೆಯನ್ನು ಮಾಡುವಾಗ ಸನಾತನದ ಸಾಧಕಿಯರಿಗೆ ಕಲಿಯಲು ಸಿಕ್ಕಿದ ಅಂಶಗಳು ಮತ್ತು ಬಂದಿರುವ ಅನುಭೂತಿಗಳು** **೬೪**

**೩. ವಿವಿಧ ಸಾತ್ತ್ವಿಕ ವಿನ್ಯಾಸಗಳು** **೬೯**


## ವಿನ್ಯಾಸಗಳ ಪರಿಭಾಷೆ ಮತ್ತು ಇತರ ವಿಶ್ಲೇಷಣೆ

**ವಿನ್ಯಾಸದಲ್ಲಿನ ಅನುಭೂತಿಜನ್ಯ ಸ್ಪಂದನಗಳು :** ವಿನ್ಯಾಸದಲ್ಲಿನ ಶಕ್ತಿ, ಭಾವ, ಚೈತನ್ಯ, ಆನಂದ ಮುಂತಾದ ಸ್ಪಂದನಗಳು ವಿನ್ಯಾಸಕ್ಕೆ ಸಂಬಂಧಪಟ್ಟಿರುತ್ತವೆ. ವಿನ್ಯಾಸದಲ್ಲಿನ ಘಟಕಗಳು ಈ ಸ್ಪಂದನಗಳಿಂದ ಅನುಭವಕ್ಕೆ ಬರುತ್ತವೆ.